2016 ಕ.ತೀ.ವ 1208

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪ್ರದೀಪ್ ಡಿ. ವೈಂಗಣಕರ

ವೈ.ಆರ್. ಇಳಗೇರ –ವಿರುದ್ಧ– ಕರ್ನಾಟಕ ರಾಜ್ಯ ಸರ್ಕಾರ, ಸಿಬಿಐ, ಬೆಂಗಳೂರು ಮುಖಾಂತರ*

ಭಾರತೀಯ ದಂಡ ಸಂಹಿತೆ /ಭಾರತೀಯ ಸಾಕ್ಷ್ಯ ಅಧಿನಿಯಮ

ಭ್ರಷ್ಟಾಚಾರ ವಿರೋಧ ಕಾಯ್ದೆ.

ಪ್ರಸ್ತುತ ಕ್ರಿಮಿನಲ್ ಅಪೀಲ್‌ನಲ್ಲಿ ಸಿಸಿಐ ವಿಶೇಷ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಲಾಗಿದೆ ಮತ್ತು ಆರೋಪಿಗೆ ಶಿಕ್ಷೆ ವಿಧಿಸಿ ನೀಡಿದ ಆದೇಶವನ್ನು ರದ್ದುಗೊಳಿಸಲು ಕೋರಲಾಗಿದೆ.

ಮೇಲ್ಮನವಿದಾರನು ಸಿಬಿಐ ಕೇಸ್ ಸಿಸಿ 3/2014ರಲ್ಲಿ ಆರೋಪಿಯಾಗಿದ್ದು ಕೇಂದ್ರ ಸುಂಕ ಇಲಾಖೆಯಲ್ಲಿ ಡೆಪ್ಯೂಟಿ ಕಮಿಷನರ್ ಎಂದು ಕೆಲಸ ನಿರ್ವಹಿಸುತ್ತಿರುವ ಸಂದರ್ಭದಲ್ಲಿ, ಲಂಚದ ಬೇಡಿಕೆ ಇಟ್ಟದ್ದು ಲಂಚವನ್ನು ಸ್ವೀಕರಿಸುತ್ತಿದ್ದಾಗ ಸಿಕ್ಕಿಬಿದ್ದು ಆರೋಪಿಯಾಗಿ ವಿಚಾರಣೆ ಎದುರಿಸಿದ್ದಾನೆ. ಕೆಳ ನ್ಯಾಯಾಲಯವು ಸಿಬಿಐ ದಾಖಲಿಸಿದ ದಾಖಲೆಗಳು ಮತ್ತು ಸಾಕ್ಷ್ಯಾಧಾರಗಳ ಮೇಲೆ ನಿರ್ಣಯಿಸುತ್ತಾ ಆರೋಪಿಯ ಆರೋಪವು ಸಾಬೀತಾಗಿದೆ ಎಂದು ತೀರ್ಮಾನಿಸಿ ಶಿಕ್ಷೆಯನ್ನು ನೀಡಿದೆ.

ಪ್ರಸ್ತುತ ಅಪೀಲಿನಲ್ಲಿ ಟೆಲಿಫೋನ್ ಕರೆ ಇತ್ಯಾದಿ ಎಲೆಕ್ಟ್ರಾನಿಕ್ ಸಾಕ್ಷ್ಯಗಳನ್ನು ಆಧರಿಸಿ ಆರೋಪಿಗೆ ಶಿಕ್ಷೆ ನೀಡಿದ್ದು ಸರಿಯಲ್ಲ ಎಂದು ತೀರ್ಮಾನಿಸಿದ ಮಾನ್ಯ ನ್ಯಾಯಾಲಯವು, ಎಲೆಕ್ಟ್ರಾನಿಕ್ ಸಾಕ್ಷ್ಯಗಳಾದ ಸಿಡಿಗಳು, ಮೊಬೈಲ್ ಸಂಭಾಷಣೆ,

*ಕ್ರಿಮಿನಲ್ ಮೇಲ್ಮನವಿ ಸಂಖ್ಯೆ: 100042/2015, ದಿನಾಂಕ: 21ನೇ ಜನವರಿ, 2016.

**ಧ್ವನಿ ರಿಕಾರ್ಡ್ಸ್ ಮತ್ತು ಟೆಲಿಫೋನ್ ಕರೆ ವಿವರಗಳನ್ನು ಸಾಕ್ಷ್ಯಗಳಾಗಿ ಹಾಜರು ಮಾಡುವಾಗ, ಭಾರತೀಯ ಸಾಕ್ಷ್ಯ ಅಧಿನಿಯಮ ಸೆಕ್ಷನ್ 65ಬಿರ ಅಡಿಯ ನಿಯಮಗಳನ್ನು ಸೂಕ್ತವಾಗಿ ಪಾಲಿಸಿಲ್ಲವಾದ್ದರಿಂದ, ಈ ಎಲ್ಲಾ ಸಾಕ್ಷ್ಯಗಳನ್ನು ಆಧರಿಸಿ ನಿರ್ಣಯ ನೀಡಿದ ಜಿಲ್ಲಾ ನ್ಯಾಯಾಲಯದ ತೀರ್ಪು ಸರಿಯಲ್ಲ ಎಂದು ತೀರ್ಮಾನಿಸಿ ಉಚ್ಚ ನ್ಯಾಯಾಲಯವು ಈ ಅಪೀಲನ್ನು ಪರಿಗಣಿಸಿ ಆರೋಪಿಯನ್ನು ಆರೋಪಗಳಿಂದ ಮುಕ್ತಗೊಳಿಸಿ ಬಿಡುಗಡೆಗೊಳಿಸಿದೆ.**

ಮೇಲ್ಮನವಿದಾರರ ಪರ: ಶ್ರೀ ವಿ.ಎಂ. ಶೀಲವಂತ್, ನ್ಯಾಯವಾದಿ ಪರವಾಗಿ ಶ್ರೀ ಕಿರಣ್ ಎಸ್. ಜವಳಿ, ಹಿರಿಯ ನ್ಯಾಯವಾದಿ.

ಎದುರುದಾರರ ಪರ: ಶ್ರೀ ಎಂ.ಬಿ. ಕಣವಿ, ಸಿಬಿಐ ಪರ ವಿಶೇಷ ನ್ಯಾಯವಾದಿ.

## ತೀರ್ಪು

**ನ್ಯಾಯಮೂರ್ತಿ ಶ್ರೀ ಪ್ರದೀಪ್ ಡಿ. ವೈಂಗಣಕರ:**

IIIನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರ (ಧಾರವಾಡದಲ್ಲಿನ ಲೋಕಾಯುಕ್ತ ಮತ್ತು ಸಿಬಿಐ ಮೊಕದ್ದಮೆಗಳ ಕುರಿತಾದ ವಿಶೇಷ ನ್ಯಾಯಾಧೀಶರ) ನ್ಯಾಯಾಲಯದ ಮುಂದಿನ ವಿಶೇಷ ಸಿಬಿಐ ಸಿಸಿಸಿ ಸಂ.3/14 ಮೊಕದ್ದಮೆಯಲ್ಲಿ, ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮ, 1988 (ಸಂಕ್ಷಿಪ್ತವಾಗಿ 'ಪಿ.ಸಿ.ಅಧಿನಿಯಮ')ರ 13(2)ನೇ ಪ್ರಕರಣದೊಂದಿಗೆ ಓದಿಕೊಂಡಂತೆ 7, 13(1)(ಡಿ) ಪ್ರಕರಣಗಳ ಅಡಿಯಲ್ಲಿ ಮತ್ತು ಭಾರತ ದಂಡ ಸಂಹಿತೆ (ಐಪಿಸಿ)ಯ 120–ಬಿ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧಗಳಿಗಾಗಿ ನೀಡಿದ ದಿನಾಂಕ 27.2.2015ರ ಅಪರಾಧ ನಿರ್ಣಯ ತೀರ್ಪು ಮತ್ತು ಶಿಕ್ಷೆಯ ಆದೇಶದ ವಿರುದ್ಧ 2ನೇ ಆಪಾದಿತನು ಮೇಲ್ಮನವಿಯನ್ನು ಸಲ್ಲಿಸಿದ್ದಾನೆ.

2. ಈ ಮೇಲ್ಮನವಿಗೆ ಕಾರಣವಾದ ಸಂಕ್ಷಿಪ್ತ ಸಂಗತಿಗಳು ಈ ಕೆಳಕಂಡಂತಿವೆ:

1ನೇ ಆಪಾದಿತ – ಟಿ.ಜಿ. ಅಲ್ಲೂರೆ ಬಳ್ಳಾರಿಯ ಡೆಪ್ಯೂಟಿ ಕಮಿಷನರ್ (ಕೇಂದ್ರ ಸುಂಕ) ಆಗಿ ಕಾರ್ಯ ನಿರ್ವಹಿಸುತ್ತಿದ್ದು, ಮೇಲ್ಮನವಿದಾರ – 2ನೇ ಆಪಾದಿತನು ಬಳ್ಳಾರಿಯ ಸೂಪರಿಂಟೆಂಡೆಂಟ್ (ಕೇಂದ್ರ ಸುಂಕ) ಆಗಿ ಅದೇ ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದನು. ದೂರುದಾರನು (ಪಿ.ಡಬ್ಲ್ಯೂ–10) ಮೆ॥ ಎಂಎವಿ ಕಾರ್ಪ್ ಇಂಡಸ್ಟ್ರೀಸ್ ಲಿಮಿಟೆಡ್‌ನ ನಿರ್ದೇಶಕ ಸ್ಥಾನದಲ್ಲಿದ್ದು, ಆ ಕಂಪನಿಗಾಗಿ ಕೇಂದ್ರ ಮಾರಾಟ ತೆರಿಗೆ ನೋಂದಣಿ ಪ್ರಮಾಣಪತ್ರವನ್ನು ಪಡೆಯುವುದಕ್ಕಾಗಿ 2ನೇ ಆಪಾದಿತನಿಗೆ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಿದ್ದನು. 29.01.2013ರಂದು ಪಿ.ಡಬ್ಲ್ಯೂ–10, 1 ಮತ್ತು 2ನೇ ಆಪಾದಿತರನ್ನು ಅವರ ಕಚೇರಿಯಲ್ಲಿಯೇ ಭೇಟಿಯಾಗಿ ಅವರಿಗೆ ಆನ್‌ಲೈನ್ ಅರ್ಜಿಯ ಹಾರ್ಡ್ ಕಾಪಿಯನ್ನು ಹಸ್ತಾಂತರಿಸಿ ಸ್ವೀಕೃತಿ ಪಡೆದನು. ಅರ್ಜಿಯಲ್ಲಿ ಒದಗಿಸಲಾದ ಮಾಹಿತಿಯ ವಿವರಗಳನ್ನು ಅಪ್–ಡೇಟ್ ಮಾಡಿದ ನಂತರ 2ನೇ ಆಪಾದಿತನು ದೂರುದಾರನಿಗೆ ಎರಡು ದಿನಗಳ ನಂತರ ಕಚೇರಿಗೆ ಬರುವಂತೆ ಹೇಳಿ ಕಳುಹಿಸಿದನು. ಎರಡು ದಿನಗಳ ನಂತರ ಪಿ.ಡಬ್ಲ್ಯೂ–10 ಕಚೇರಿಗೆ ಹೋಗಿ 2ನೇ ಆಪಾದಿತನನ್ನು ಭೇಟಿ ಮಾಡಿದಾಗ, ಆತನು ಕೆಲವು ಔಪಚಾರಿಕತೆಗಳನ್ನು ಪಾಲಿಸುವಂತೆ ಆತನಿಗೆ ತಿಳಿಸಿದನು. ನಂತರ ಆತನನ್ನು 1ನೇ ಆಪಾದಿತನ ಕೊಠಡಿಗೆ ಕರೆದುಕೊಂಡು ಹೋದನು, ಅಲ್ಲಿ 1 ಮತ್ತು 2ನೇ ಆಪಾದಿತರಿಬ್ಬರೂ ನೋಂದಣಿ ಪ್ರಮಾಣಪತ್ರವನ್ನು ನೀಡುವುದಕ್ಕೆ 1.5 ಲಕ್ಷ ರೂ.ಗಳ ಮೊತ್ತದ ಲಂಚದ ಬೇಡಿಕೆಯನ್ನಿಟ್ಟರು. ಆದರೆ ಮಾತುಕತೆಯ ನಂತರ ಆಪಾದಿತರಿಬ್ಬರೂ 30,000/– ರೂ.ಗಳಿಗೆ ಅದನ್ನು ಇಳಿಸಿದರು. 1 ಮತ್ತು 2ನೇ ಆಪಾದಿತರು ಬೇಡಿಕೆಯಿಟ್ಟಿರುವ ಲಂಚದ ಮೊತ್ತವನ್ನು ನೀಡುವುದಕ್ಕೆ ದೂರುದಾರನಿಗೆ ಆಸಕ್ತಿಯಿರಲಿಲ್ಲ. ಹಾಗಾಗಿ, ದೂರುದಾರನು 26.2.2013ರಂದು ಬಳ್ಳಾರಿಯ ಲೋಕಾಯುಕ್ತ ಪೊಲೀಸ್ ಠಾಣೆಗೆ ದೂರನ್ನು ಸಲ್ಲಿಸಿದನು. ಜೊತೆಗೆ, ತನ್ನ ಮೊಬೈಲ್‌ನಲ್ಲಿ ದಾಖಲಿಸಿಕೊಂಡಿದ್ದ ತನ್ನ ಮತ್ತು ಆಪಾದಿತರ ನಡುವಿನ ಸಂಭಾಷಣೆಯನ್ನು ಕೂಡ ಕೇಳಿಸಿದನು. ಲೋಕಾಯುಕ್ತ ಪೊಲೀಸರು ಸದರಿ ಸಂಭಾಷಣೆಯನ್ನು ಲ್ಯಾಪ್‌ಟಾಪ್ ಮುಖಾಂತರ ಮೂರು ಸಿಡಿಗಳಲ್ಲಿ ಡೌನ್‌ಲೋಡ್ ಮಾಡಿಕೊಂಡರು. ಆಪಾದಿತರಿಬ್ಬರ ವಿರುದ್ಧ ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ 13(2)ನೇ ಪ್ರಕರಣದೊಂದಿಗೆ ಓದಿಕೊಂಡಂತೆ 7,13(1)(ಡಿ) ಪ್ರಕರಣಗಳ ಅಡಿಯಲ್ಲಿನ ದಂಡನೀಯ ಅಪರಾಧಗಳಿಗಾಗಿ ಕ್ರೈಂ ನಂ.4/13 ಅನ್ನು ದಾಖಲಿಸಿಕೊಂಡು,

ಮುಚ್ಚಿದ ಲಕೋಟೆಯಲ್ಲಿ ಮೂಲ ದೂರು ಮತ್ತು ಎಫ್‌ಐಆರ್ ಅನ್ನು ವಿಶೇಷ ನ್ಯಾಯಾಧೀಶರಿಗೆ ಕಳುಹಿಸಲಾಯಿತು. ಲೋಕಾಯುಕ್ತ ಪೊಲೀಸ್ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್‌ರವರು ತಮ್ಮ ಕಚೇರಿಯಲ್ಲಿ ಇಬ್ಬರು ಪಂಚರ ಎಂದರೆ, ಪಿಡಬ್ಲೂ–4 ಬಸವರಾಜ್, ಪಿಡಬ್ಲ್ಯೂ–7 ಮೊಹಮದ್ ಆಯುಬ್ ಮತ್ತು ದೂರುದಾರರ ಉಪಸ್ಥಿತಿಯ ಭದ್ರತೆಯನ್ನು ಪಡೆದರು. ಅವರನ್ನು ಪರಸ್ಪರ ಪರಿಚಯಿಸಿ, ಅವರ ಉಪಸ್ಥಿತಿಯನ್ನು ಯಾಕಾಗಿ ಭದ್ರತೆಗೆ ತೆಗೆದುಕೊಳ್ಳಬೇಕು ಎಂಬ ಉದ್ದೇಶವನ್ನು ಅವರಿಗೆ ತಿಳಿಸಿಕೊಟ್ಟರು. ದೂರುದಾರರು ಲಂಚವಾಗಿ ನೀಡಬೇಕಾಗಿದ್ದ 1000 ಮುಖಬೆಲೆಯ 30 ನೋಟುಗಳನ್ನು ಹಾಜರುಪಡಿಸಿದರು. ಆ ಎಲ್ಲಾ ನೋಟುಗಳಿಗೆ ಅವರ ಸಿಬ್ಬಂದಿಯ ನೆರವಿನಿಂದ ಫಿನಾಲ್ತಾಲೀನ್ ಪುಡಿಯನ್ನು ಹಚ್ಚಿದರು. ಫಿನಾಲ್ತಾಲೀನ್ ಪರೀಕ್ಷೆಯ ಮಹತ್ವದ ಬಗ್ಗೆ ಪ್ರಾದರ್ಶಿಕೆ ನೀಡಲಾಯಿತು. ನೋಟುಗಳ ಸಂಖ್ಯೆಯನ್ನು ದಾಖಲಿಸಲಾಯಿತು. ನೋಟುಗಳನ್ನು ದೂರುದಾರರಿಗೆ ವಹಿಸಲಾಯಿತು. ಸವಿವರವಾದ ವಹಿಸುವಿಕೆ ಪಂಚನಾಮೆಯನ್ನು ಪಂಚರ ಸಮಕ್ಷಮದಲ್ಲಿ ನಿಶಾನೆ ಪಿ.11 ರಂತೆ ಬರೆಯಲಾಯಿತು. ಪಂಚರುಗಳಲ್ಲಿ ಒಬ್ಬರಾದ ಪಿ.ಡಬ್ಲ್ಯೂ.4 ಅನ್ನು, ದೂರುದಾರರೊಂದಿಗೆ 1 ಮತ್ತು 2ನೇ ಆಪಾದಿತರ ಕಚೇರಿಗೆ ಹೋಗಿ ದೂರುದಾರ ಮತ್ತು ಆಪಾದಿತರ ನಡುವೆ ಏನು ನಡೆಯುತ್ತದೆ ಎಂಬುದನ್ನು ಗಮನಿಸುವಂತೆ ಕೋರಲಾಯಿತು. ದೂರುದಾರರಿಗೆ 1 ಮತ್ತು 2ನೇ ಆಪಾದಿತರ ಕಚೇರಿಗೆ ಹೋಗಿ ತನ್ನ ಕೆಲಸ ಏನಾಯಿತು ಎಂಬ ಬಗ್ಗೆ 1 ಮತ್ತು 2ನೇ ಆಪಾದಿತರನ್ನು ವಿಚಾರಿಸುವಂತೆ ತಿಳಿಸಲಾಯಿತು. ಅವರು ಇನ್ನೂ ಏನಾದರೂ ಲಂಚಕ್ಕೆ ಬೇಡಿಕೆ ಇಟ್ಟರೆ, ಅದಕ್ಕಾಗಿ ಸಜ್ಜುಗೊಳಿಸಿದ ಕರೆನ್ಸಿ ನೋಟುಗಳನ್ನು ಹಸ್ತಾಂತರಿಸುವಂತೆ ಮತ್ತು ಆಪಾದಿತರು ಆ ನೋಟುಗಳನ್ನು ಸ್ವೀಕರಿಸಿದರೆ, 1 ಮತ್ತು 2ನೇ ಆಪಾದಿತರ ಕಚೇರಿಯಿಂದ ಹೊರ ಬಂದು ಮೊದಲೇ ತಿಳಿಸಿದ ಸಂಕೇತವನ್ನು ನೀಡುವಂತೆ ದೂರುದಾರನಿಗೆ ತಿಳಿಸಲಾಯಿತು. ಪೊಲೀಸ್ ಇನ್‌ಸ್ಪೆಕ್ಟರ್ ಮತ್ತು ಇತರ ಸಿಬ್ಬಂದಿ ವರ್ಗದವರು ಕಚೇರಿಯಿಂದ ಸ್ವಲ್ಪವೇ ದೂರದಲ್ಲಿ ಕಾಯುತ್ತಿದ್ದರು. ದೂರುದಾರನು ಪಿಡಬ್ಲ್ಯೂ.4 ನೊಂದಿಗೆ 1 ಮತ್ತು 2ನೇ ಆಪಾದಿತರ ಕಚೇರಿಗೆ ಹೋದನು, ಅವರು 2ನೇ ಆಪಾದಿತನನ್ನು ಭೇಟಿ ಮಾಡಿದರು, 2ನೇ ಆಪಾದಿತನು ತಾವು ಬೇಡಿಕೆಯಿಟ್ಟಿದ್ದ ಮೊತ್ತವನ್ನು ತಂದಿರುವೆಯಾ ಎಂದು ದೂರುದಾರನನ್ನು ವಿಚಾರಿಸಿದನು. 2ನೇ ಆಪಾದಿತನು ದೂರುದಾರನನ್ನು 1ನೇ ಆಪಾದಿತನ ಕೊಠಡಿಗೆ ಕರೆದುಕೊಂಡು

ಹೋದನು, 1ನೇ ಆಪಾದಿತನೂ ಸಹ ಲಂಚದ ಮೊತ್ತಕ್ಕೆ ಬೇಡಿಕೆಯಿಟ್ಟು, ಪಿ.ಡಬ್ಲ್ಯೂ–4ನ ಸಮಕ್ಷಮದಲ್ಲಿ ಅದನ್ನು ಸ್ವೀಕರಿಸಿದನು. ಅದಾದ ಕೂಡಲೇ ದೂರುದಾರನು 1ನೇ ಆಪಾದಿತನ ಕೊಠಡಿಯಿಂದ ಹೊರಬಂದು ಪೊಲೀಸ್ ಇನ್‌ಸ್ಪೆಕ್ಟರ್‌ಗೆ ಮೊದಲೇ ತಿಳಿಸಲಾಗಿದ್ದ ಸಂಕೇತವನ್ನು ನೀಡಿದನು. ಕೂಡಲೇ ಪೊಲೀಸ್ ಇನ್‌ಸ್ಪೆಕ್ಟರ್ ತನ್ನ ಸಿಬ್ಬಂದಿಯೊಂದಿಗೆ ಹಾಗೂ ಮತ್ತೊಬ್ಬ ಪಂಚನೊಂದಿಗೆ 1ನೇ ಆಪಾದಿತನ ಕೊಠಡಿಗೆ ಧಾವಿಸಿದನು. ದೂರುದಾರ ಮತ್ತು ಪಿ.ಡಬ್ಲ್ಯೂ–4 ಲಂಚದ ಮೊತ್ತವನ್ನು ಕೇಳಿ ಪಡೆದ ಅಧಿಕಾರಿಗಳೆಂದು 1 ಮತ್ತು 2ನೇ ಆಪಾದಿತರನ್ನು ತೋರಿಸಿದರು. 1ನೇ ಆಪಾದಿತನ ಕೈಯನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಯಿತು. ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿತು. ಅದನ್ನು ಸಂಗ್ರಹಿಸಿಕೊಳ್ಳಲಾಯಿತು. 1ನೇ ಆಪಾದಿತನಿಂದ ಘಟನೆಗೆ ಬಳಸಲಾದ ನೋಟುಗಳನ್ನು ವಶಪಡಿಸಿಕೊಳ್ಳಲಾಯಿತು. ದೂರುದಾರನು ಪೊಲೀಸ್ ಇನ್‌ಸ್ಪೆಕ್ಟರನ ಮುಂದೆ, ತಾನು 2ನೇ ಆಪಾದಿತನ ಕಚೇರಿಗೆ ಹೋಗಿ ಆತನನ್ನು ಸಂಪರ್ಕಿಸಿದಾಗ, ಆತನು ತನ್ನನ್ನು ಲಂಚದ ಮೊತ್ತವನ್ನು ತಂದಿರುವೆಯಾ ಎಂದು ವಿಚಾರಿಸಿ, ನಂತರ 1ನೇ ಆಪಾದಿತನ ಕೊಠಡಿಗೆ ಕರೆದುಕೊಂಡು ಹೋದನು. ಅಲ್ಲಿ 1ನೇ ಆಪಾದಿತನು ತನ್ನಿಂದ ಲಂಚದ ಮೊತ್ತವನ್ನು ಕೇಳಿ ಪಡೆದುಕೊಂಡನು ಎಂದು ಹೇಳಿದನು. ಆ ಬಗ್ಗೆ ಪಿ.ಡಬ್ಲ್ಯೂ–4 ಅನ್ನು ವಿಚಾರಿಸಿದಾಗ, ಆತನು ದೂರುದಾರನು ನೀಡಿದ ಹೇಳಿಕೆಯನ್ನೇ ಪುಷ್ಟೀಕರಿಸಿದನು. ಬಲೆಗೆ ಬೀಳಿಸಿದ ವಿವರವಾದ ಪಂಚನಾಮೆಯನ್ನು ಪಂಚರ ಸಮಕ್ಷಮದಲ್ಲಿ ನಿಶಾನೆ ಪಿ.13ರಲ್ಲಿರುವಂತೆ ನಡೆಸಲಾಯಿತು. ಇಬ್ಬರೂ ಆಪಾದಿತರನ್ನು ಬಂಧಿಸಿ ಬಳ್ಳಾರಿಯ ಲೋಕಾಯುಕ್ತ ಕಚೇರಿಗೆ ಕರೆದುಕೊಂಡು ಬರಲಾಯಿತು; ಅವರನ್ನು ವಿಶೇಷ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಯಿತು. ಬಳ್ಳಾರಿ ಲೋಕಾಯುಕ್ತ ಪೊಲೀಸ್ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರರಿಗೆ ಇಬ್ಬರೂ ಆಪಾದಿತರು ಕೇಂದ್ರ ಸರ್ಕಾರದ ಅಧಿಕಾರಿಗಳೆಂದು ತಿಳಿದುಬಂದದ್ದರಿಂದ ಅವರು ಪ್ರಕರಣವನ್ನು ಸಿಬಿಐಗೆ ಹಸ್ತಾಂತರಿಸಿದರು. ಶ್ರೀ ಎಸ್. ಹರಿಹರನ್ ಪೊಲೀಸ್ ಇನ್‌ಸ್ಪೆಕ್ಟರ್, ಸಿಬಿಐ, ಎಸಿಪಿ, ಬೆಂಗಳೂರು ಇವರು ಅಪರಾಧದ ಮೊಕದ್ದಮೆಯನ್ನು ಆರ್‌ಸಿ.04 (ಎ)(3)/ 2013–ಸಿಬಿಐ/ಎಸಿಬಿ, ಬೆಂಗಳೂರು ಎಂಬುದಾಗಿ ಪ್ರತ್ಯೇಕ ಮೊಕದ್ದಮೆಯನ್ನು ದಾಖಲಿಸಿಕೊಂಡರು. ತನಿಖೆ ಮುಕ್ತಾಯಗೊಂಡ ನಂತರ, ಅವರು ಎಲ್ಲಾ ತನಿಖಾ

ದಾಖಲೆಗಳನ್ನು ಮಂಜೂರಾತಿ ಪ್ರಾಧಿಕಾರಕ್ಕೆ ಸಲ್ಲಿಸಿ, ನಿಶಾನೆ ಪಿ.14ರಂತೆ ಮಂಜೂರಾತಿ ಆದೇಶವನ್ನು ಪಡೆದುಕೊಂಡರು. ಮಂಜೂರಾತಿ ಆದೇಶವನ್ನು ಪಡೆದುಕೊಂಡ ನಂತರ, ಪಿಡಬ್ಲ್ಯೂ–12– ಸಿಬಿಐ ಪೊಲೀಸ್ ಇನ್‌ಸ್ಪೆಕ್ಟರ್ ಎಸ್. ಹರಿಹರನ್ ಅವರು ವಿಶೇಷ ನ್ಯಾಯಾಧೀಶರ ಮುಂದೆ ಮೇಲೆ ತಿಳಿಸಿದ ಅಪರಾಧಗಳಿಗಾಗಿ ಆಪಾದಿತರಿಬ್ಬರ ವಿರುದ್ಧ ಸ್ಪೆಷಲ್.ಸಿಬಿಐ.ಸಿಸಿಸಿ ಸಂ.3/14 ರಲ್ಲಿ ಆರೋಪ ಪಟ್ಟಿಯನ್ನು ಸಲ್ಲಿಸಿದರು. ವಿಶೇಷ ಸರ್ಕಾರೀ ಅಭಿಯೋಜಕರು ಮತ್ತು ಎದುರುದಾರರ ನ್ಯಾಯವಾದಿಗಳ ಅಹವಾಲನ್ನು ಆಲಿಸಿದ ಮೇಲೆ, ಆಪಾದಿತರಿಬ್ಬರ ವಿರುದ್ಧ, ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ 13(2)ನೇ ಪ್ರಕರಣದೊಂದಿಗೆ ಓದಿಕೊಂಡಂತೆ 7, 13(1)(ಡಿ) ಪ್ರಕರಣಗಳ ಅಡಿಯಲ್ಲಿ ಮತ್ತು ಭಾರತ ದಂಡ ಸಂಹಿತೆ 120–ಬಿ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧಗಳಿಗಾಗಿ ಆರೋಪಗಳನ್ನು ರೂಪಿಸಲಾಯಿತು. ಆಪಾದಿತರು ತಾವು ತಪ್ಪಿತಸ್ಥರಲ್ಲವೆಂದು ವಾದಿಸಿದರು. ಮೊಕದ್ದಮೆಯ ಇತ್ಯರ್ಥದ ಅವಧಿಯಲ್ಲಿ, 1ನೇ ಆಪಾದಿತನು ಮರಣ ಹೊಂದಿದ್ದರಿಂದ ಆತನ ವಿರುದ್ಧದ ಮೊಕದ್ದಮೆಯನ್ನು ಕೊನೆಗೊಳಿಸಲಾಯಿತು. 2ನೇ ಆಪಾದಿತನ ವಿರುದ್ಧ ಅಧಿವಿಚಾರಣೆಯು ಮುಂದುವರಿಯಿತು. ಪ್ರಾಸಿಕ್ಯೂಷನ್‌ನವರು 12 ಸಾಕ್ಷಿದಾರರನ್ನು ಪಿಡಬ್ಲ್ಯೂ–1 ರಿಂದ 12 ಎಂದು ವಿಚಾರಣೆಗೊಳಪಡಿಸಿದರು, ಎಂ.ಓ 1 ರಿಂದ 18ರ ವರೆಗಿನ ಮುದ್ದೆ ಮಾಲುಗಳ ಜೊತೆಗೆ ನಿಶಾನೆ ಪಿ.1 ರಿಂದ ಪಿ.40 ಅನ್ನು ಗುರುತು ಮಾಡಿಸಿದರು. ಪ್ರಾಸಿಕ್ಯೂಷನ್ ಭಾಗದ ಮುಕ್ತಾಯದ ನಂತರ, 2ನೇ ಆಪಾದಿತನನ್ನು ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದ ಅಡಿಯಲ್ಲಿ ವಿಚಾರಣೆ ಮಾಡಲಾಯಿತು. 2ನೇ ಆಪಾದಿತನ ಪ್ರತಿವಾದವು ಸಂಪೂರ್ಣ ನಿರಾಕರಣೆಯದ್ದು ಮತ್ತು ಸುಳ್ಳು ಆಪಾದನೆಯೆಂಬುದೇ ಆಗಿತ್ತು. 2ನೇ ಆಪಾದಿತನು ಯಾವುದೇ ಸಾಕ್ಷ್ಯವನ್ನು ಮಂಡಿಸಲು ಮುಂದಾಗಲಿಲ್ಲ. ವಾದ ಪ್ರತಿವಾದಗಳನ್ನು ಆಲಿಸಲಾಯಿತು. ವಾದ–ಪ್ರತಿವಾದಗಳನ್ನು ಆಲಿಸಿದ ನಂತರ ಮತ್ತು ಸಾಕ್ಷ್ಯವನ್ನು ಮೌಲ್ಯಮಾಪನ ಮಾಡಿದ ನಂತರ, ಪ್ರಶ್ನಿತ ತೀರ್ಪು ಮತ್ತು ಆದೇಶದ ಮೂಲಕ, ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ 13(2) ಪ್ರಕರಣದೊಂದಿಗೆ ಓದಿಕೊಂಡಂತೆ 7, 13(1)(ಡಿ)ಪ್ರಕರಣಗಳ ಮೇರೆಗಿನ ದಂಡನೀಯವಾದ ಅಪರಾಧಗಳಿಗಾಗಿ ಮತ್ತು ಭಾರತ ದಂಡ ಸಂಹಿತೆಯ 120–ಬಿ ಪ್ರಕರಣದ ಮೇರೆಗಿನ ದಂಡನೀಯವಾದ ಅಪರಾಧಗಳಿಗಾಗಿ 2ನೇ ಆಪಾದಿತನನ್ನು ಅಪರಾಧ ನಿರ್ಣೀತನನ್ನಾಗಿಸಲಾಯಿತು

ಮತ್ತು ಭಾರತ ದಂಡ ಸಂಹಿತೆಯ 120–ಬಿ ಪ್ರಕರಣದ ಮೇರೆಗಿನ ದಂಡನೀಯವಾದ ಅಪರಾಧಕ್ಕಾಗಿ ಆರು ತಿಂಗಳ ಅವಧಿಯ ಸಾದಾ ಕಾರಾಗೃಹವಾಸ ಶಿಕ್ಷೆಗೆ ಮತ್ತು 5,000/– ರೂ.ಗಳ ಜುಲ್ಮಾನೆಗೆ ಮತ್ತು ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದರೆ ಒಂದು ತಿಂಗಳ ಅವಧಿಯ ಸಾದಾ ಕಾರಾಗೃಹ ಶಿಕ್ಷೆಗೆ, ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ 7ನೇ ಪ್ರಕರಣದ ಮೇರೆಗಿನ ದಂಡನೀಯವಾದ ಅಪರಾಧಕ್ಕಾಗಿ ಆರು ತಿಂಗಳ ಅವಧಿಯ ಸಾದಾ ಕಾರಾಗೃಹ ಶಿಕ್ಷೆ ಮತ್ತು 5,000/– ರೂ.ಗಳ ಜುಲ್ಮಾನೆ ಶಿಕ್ಷೆಗೆ, ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ 13(2)ನೇ ಪ್ರಕರಣದೊಂದಿಗೆ ಓದಿಕೊಂಡಂತೆ 13(1)(ಡಿ) ಪ್ರಕರಣದ ಮೇರೆಗಿನ ದಂಡನೀಯವಾದ ಅಪರಾಧಕ್ಕಾಗಿ ಒಂದು ವರ್ಷ ಅವಧಿಯ ಸಾದಾ ಕಾರಾಗೃಹ ಶಿಕ್ಷೆಗೆ ಮತ್ತು 5,000/– ರೂ.ಗಳ ಜುಲ್ಮಾನೆಗೆ ಹಾಗೂ ಜುಲ್ಮಾನೆ ಸಂದಾಯ ಮಾಡಲು ತಪ್ಪಿದರೆ ಒಂದು ತಿಂಗಳ ಅವಧಿಯ ಸಾದಾ ಕಾರಾಗೃಹ ಶಿಕ್ಷೆಗೆ ಗುರಿಪಡಿಸಲಾಯಿತು.

3. ಅಪರಾಧ ನಿರ್ಣಯದ ತೀರ್ಪು ಮತ್ತು ಶಿಕ್ಷೆಯ ಆದೇಶದ ಕಾನೂನು ಸಮ್ಮತತೆ ಹಾಗೂ ಸರಿತನವನ್ನು ಪ್ರಶ್ನಿಸಿ 2ನೇ ಆಪಾದಿತನು ಈ ಮೇಲ್ಮನವಿಯನ್ನು ಸಲ್ಲಿಸಿದ್ದಾನೆ.

4. ನಾನು 2ನೇ ಆಪಾದಿತ ಹಾಗೂ ಎದುರುದಾರ ಸಿಬಿಐ ಪರ ಹಾಜರಾದ ಇಬ್ಬರೂ ನ್ಯಾಯವಾದಿಗಳು ಮಂಡಿಸಿದ ವಾದ–ಪ್ರತಿವಾದಗಳನ್ನು ಆಲಿಸಿದ್ದೇನೆ ಮತ್ತು ದಾಖಲೆಗಳನ್ನು ಪರಿಶೀಲಿಸಿದ್ದೇನೆ.

5. ಮೇಲ್ಮನವಿದಾರರ ಪರ ಹಾಜರಾದ ಹಿರಿಯ ನ್ಯಾಯವಾದಿ ಶ್ರೀ ಕಿರಣ್ ಎಸ್. ಜವಳಿಯವರ ವಾದ ಇಂತಿದೆ: ಲಂಚದ ಮೊತ್ತದ ಬೇಡಿಕೆ ಹಾಗೂ ಸ್ವೀಕಾರ ಸಂಬಂಧದ ವಾದವನ್ನು ಸ್ಥಾಪಿಸುವುದಕ್ಕೆ ಪ್ರಾಸಿಕ್ಯೂಷನ್ ಕೆಲವು ಸಾಕ್ಷ್ಯಗಳನ್ನು ಮಂಡಿಸಿದ್ದರೂ ಕೂಡ, ಅದು 1ನೇ ಆಪಾದಿತನ ವಿರುದ್ಧ ಮಾತ್ರವೇ ಆಗಿದ್ದು, 2ನೇ ಆಪಾದಿತನು ಆಪಾದಿತ ಅಪರಾಧಗಳನ್ನು ಮಾಡಿದ್ದಾನೆ ಎಂಬ ಬಗ್ಗೆ ಆತನ ವಿರುದ್ಧ ಯಾವುದೇ ಸಾಕ್ಷ್ಯಾಧಾರಗಳನ್ನು ಮಂಡಿಸಿಲ್ಲ. 2ನೇ ಆಪಾದಿತನು

ಲಂಚದ ಮೊತ್ತಕ್ಕೆ ಬೇಡಿಕೆಯನ್ನು ಇಟ್ಟಿಲ್ಲ ಅಥವಾ ಅದನ್ನು ದೂರುದಾರನಿಂದ ಸ್ವೀಕರಿಸಿಯೂ ಇಲ್ಲ, 1ನೇ ಆಪಾದಿತನಿಂದ ವಶಪಡಿಸಿಕೊಳ್ಳಲಾಗಿದೆಯೆಂದು ಹೇಳಲಾದ ಲಂಚದ ಹಣದ ಬಗ್ಗೆ 2ನೇ ಆಪಾದಿತನಿಗೆ ಯಾವುದೇ ಸಂಬಂಧವಿಲ್ಲ ಅಥವಾ 2ನೇ ಆಪಾದಿತನು 1ನೇ ಆಪಾದಿತನೊಂದಿಗೆ ಯಾವುದೇ ಕಾನೂನುಬಾಹಿರ ಕೃತ್ಯಗಳನ್ನು ಮಾಡುವುದಕ್ಕೆ ಅಥವಾ ಕಾನೂನು ಬಾಹಿರ ಮಾರ್ಗಗಳ ಮೂಲಕ ಕಾನೂನು ಬದ್ಧ ಕೃತ್ಯವನ್ನು ಮಾಡುವುದಕ್ಕೆ ಯಾವುದೇ ಒಪ್ಪಂದವನ್ನು ಮಾಡಿಕೊಂಡಿರಲಿಲ್ಲ. ಅಲ್ಲದೆ 2ನೇ ಆಪಾದಿತನ ವಿರುದ್ಧ ಯಾವುದೇ ಪ್ರಕರಣವೂ ರೂಪಿತವಾಗಿಲ್ಲ, ಆದರೂ, ಯಾವುದೇ ಸಾಕ್ಷ್ಯವಿಲ್ಲದಿದ್ದರೂ, ಅದರಲ್ಲೂ ಕಾನೂನುಬದ್ಧವಾದ ಅಂಗೀಕೃತ ಸಾಕ್ಷ್ಯ ಏನೂ ಇಲ್ಲದಿದ್ದರೂ ಮಾನ್ಯ ವಿಶೇಷ ನ್ಯಾಯಾಧೀಶರು 2ನೇ ಆಪಾದಿತನನ್ನು ಅಪರಾಧ ನಿರ್ಣೀತನನ್ನಾಗಿಸಿದ್ದಾರೆ. ಆದ್ದರಿಂದ ಮೇಲ್ಮನವಿದಾರ –2ನೇ ಆಪಾದಿತನ ವಿರುದ್ಧದ ಅಪರಾಧ ನಿರ್ಣಯ ತೀರ್ಪು ಹಾಗೂ ಶಿಕ್ಷೆಯ ಆದೇಶವನ್ನು ರದ್ದುಪಡಿಸಬೇಕೆಂದು ಮಾನ್ಯ ನ್ಯಾಯವಾದಿಗಳು ಕೋರಿದ್ದಾರೆ.

6. ಮತ್ತೊಂದೆಡೆ, ಸಿಬಿಐ ಪರ ಮಾನ್ಯ ನ್ಯಾಯವಾದಿಗಳು, ವಿಚಾರಣೆಗೊಳಪಡಿಸಲಾದ ಛಾಯಾ ಸಾಕ್ಷಿ ಪಿಡಬ್ಲ್ಯೂ–4 ಮತ್ತು ಇತರ ಸಾಕ್ಷಿದಾರರ ಸಾಕ್ಷ್ಯವು ಎಲ್ಲಾ ರೀತಿಯಿಂದಲೂ ದೂರುದಾರರ ಸಾಕ್ಷ್ಯವನ್ನು ಪುಷ್ಟೀಕರಿಸುತ್ತಿದ್ದು, ಪ್ರಾಸಿಕ್ಯೂಷನ್ ಕೇವಲ ಲಂಚದ ಬೇಡಿಕೆಯನ್ನು ಯುಕ್ತ ಸಂದೇಹವನ್ನು ಮೀರಿ ರುಜುವಾತುಪಡಿಸಿರುವುದು ಮಾತ್ರವಲ್ಲದೆ, 1ನೇ ಆರೋಪಿಯು 30,000/– ರೂ. ಲಂಚದ ಮೊತ್ತವನ್ನು ಸ್ವೀಕರಿಸಿರುವುದು ಮತ್ತು ಪಂಚರ ಸಮಕ್ಷಮದಲ್ಲಿ 1ನೇ ಆಪಾದಿತನಿಂದ ಲಂಚದ ಮೊತ್ತವನ್ನು ವಶಪಡಿಸಿಕೊಂಡಿರುವುದನ್ನೂ ಸಹ ರುಜುವಾತುಪಡಿಸಿದೆ, ಅಂತೆಯೇ ಪ್ರಾಸಿಕ್ಯೂಷನ್, 1ನೇ ಆಪಾದಿತನು ಇಟ್ಟಿರುವ ಲಂಚದ ಬೇಡಿಕೆಯನ್ನು ಮತ್ತು ಆತನಿಂದ ಆದ ಲಂಚ ಸ್ವೀಕಾರವನ್ನು ಹಾಗೂ ಆತನಿಂದ ಲಂಚದ ಹಣವನ್ನು ವಸೂಲಿ ಮಾಡಿರುವುದನ್ನು ರುಜುವಾತುಪಡಿಸಿದೆಯೆಂದು ವಾದಿಸಿದ್ದಾರೆ. ಮುಂದುವರಿದು, ದೂರುದಾರನಿಂದ ಮೊದಲನೆ ಲಂಚದ ಮೊತ್ತಕ್ಕೆ ಬೇಡಿಕೆಯನ್ನಿಟ್ಟಿದ್ದು 2ನೇ ಆಪಾದಿತ – ಮೇಲ್ಮನವಿದಾರ, ಮತ್ತೊಮ್ಮೆ ಲಂಚದ ಬೇಡಿಕೆಯನ್ನಿಟ್ಟು, ಲಂಚದ ಮೊತ್ತವನ್ನು

ಸ್ವೀಕರಿಸಿದ 1ನೇ ಆಪಾದಿತನ ಕೊಠಡಿಗೆ ಕರೆದುಕೊಂಡು ಹೋದವನು ಕೂಡ 2ನೇ ಆಪಾದಿತ–ಮೇಲ್ಮನವಿದಾರನೇ ಆಗಿದ್ದಾನೆ. ಹಾಗಾಗಿ, ಪ್ರಾಸಿಕ್ಯೂಷನ್ ದೂರುದಾರನ ಪರವಾಗಿ ತಮ್ಮ ಹುದ್ದೆಯ ಕರ್ತವ್ಯವನ್ನು ನಿರ್ವಹಿಸುವುದಕ್ಕೆ ದೂರುದಾರನಿಂದ ಆಪಾದಿತರು ಲಂಚದ ಹಣಕ್ಕೆ ಬೇಡಿಕೆಯಿಟ್ಟು, ಪಡೆದಿರುವುದನ್ನು ರುಜುವಾತುಪಡಿಸಿದೆಯೆಂದು ಮತ್ತು 1 ಮತ್ತು 2ನೇ ಆಪಾದಿತರಿಬ್ಬರೂ ಪರಸ್ಪರ ಒಳಸಂಚು ನಡೆಸಿ ಅಪರಾಧವನ್ನು ಮಾಡಿದ್ದಾರೆಂಬುದನ್ನು ಪ್ರಾಸಿಕ್ಯೂಷನ್ ಸಾಬೀತುಪಡಿಸಿದೆಯೆಂದು ನ್ಯಾಯವಾದಿಗಳು ವಾದಿಸಿದ್ದಾರೆ. ಮಾನ್ಯ ವಿಶೇಷ ನ್ಯಾಯಾಧೀಶರು ಸಾಕ್ಷ್ಯವನ್ನು ಸೂಕ್ತವಾಗಿ ಮೌಲ್ಯಮಾಪನ ಮಾಡಿ, ಆಪಾದಿಸಲಾದ ಅಪರಾಧಗಳನ್ನು ಮಾಡಿದ್ದಕ್ಕಾಗಿ ಮೇಲ್ಮನವಿದಾರ – 2ನೇ ಆಪಾದಿತನನ್ನು ಅಪರಾಧ ನಿರ್ಣೀತನನ್ನಾಗಿ ಮಾಡಿ, ಶಿಕ್ಷೆ ವಿಧಿಸಿರುವುದು ಸರಿಯಾಗಿಯೇ ಇದ್ದು, ವಿಶೇಷ ನ್ಯಾಯಾಧೀಶರು ಹೊರಡಿಸಿದ ಆದೇಶದಲ್ಲಿ ಮಧ್ಯಪ್ರವೇಶ ಮಾಡುವುದಕ್ಕೆ ಯಾವುದೇ ಅವಕಾಶವಿಲ್ಲವೆಂದು ನ್ಯಾಯವಾದಿಯು ವಾದಿಸಿ, ಆದ್ದರಿಂದ ಮೇಲ್ಮನವಿಯನ್ನು ವಜಾಗೊಳಿಸುವಂತೆ ಅವರು ಕೋರಿದ್ದಾರೆ.

7. ಇಬ್ಬರೂ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದಗಳನ್ನು ಆಲಿಸಿ, ದಾಖಲೆಯಲ್ಲಿರುವ ಸಮಗ್ರ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿದ ಮೇಲೆ, ನನ್ನ ಪರಿಗಣನೆಗೆ ಉದ್ಭವಿಸುವ ಏಕಮಾತ್ರ ವಿವಾದಾಂಶವು ಈ ಕೆಳಕಂಡಂತಿದೆ:

> “ಮೇಲ್ಮನವಿದಾರ – 2ನೇ ಆಪಾದಿತನ ಅಪರಾಧ ನಿರ್ಣಯ ಹಾಗೂ ಶಿಕ್ಷೆಯು ಕಾನೂನಾತ್ಮಕವಾಗಿ ಸಮರ್ಥನೀಯ–ವಾದುದಾಗಿದೆಯೇ?”

8. ದಾಖಲೆಯಲ್ಲಿರುವ ಸಮಗ್ರ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿದ್ದರಿಂದ ಮತ್ತು ಪಕ್ಷಕಾರರ ಪರ ಹಾಜರಾದ ಇಬ್ಬರೂ ಮಾನ್ಯ ನ್ಯಾಯವಾದಿಗಳ ವಾದಗಳನ್ನು ಆಲಿಸಿದ ಮೇಲೆ, 1ನೇ ಆಪಾದಿತನು ಕೇಂದ್ರ ಸುಂಕ ಉಪ–ಆಯುಕ್ತನಾಗಿ ಮತ್ತು 2ನೇ ಆಪಾದಿತನು ಕೇಂದ್ರ ಸುಂಕ ಅಧೀಕ್ಷಕನಾಗಿ ಬಳ್ಳಾರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು ಎಂಬ ಬಗ್ಗೆ ಯಾವುದೇ ತಕರಾರಿಲ್ಲವೆಂಬುದು ಕಂಡು ಬರುತ್ತದೆ.

ಆರೋಪ ಪಟ್ಟಿಯನ್ನು ಸಲ್ಲಿಸುವಾಗ 1ನೇ ಆಪಾದಿತನು ಮರಣ ಹೊಂದಿದ್ದ, ಆದ್ದರಿಂದ 1ನೇ ಆಪಾದಿತನಿಗೆ ಸಂಬಂಧಿಸುವಷ್ಟರ ಮಟ್ಟಿಗೆ ಮಂಜೂರಾತಿ ಪಡೆಯುವ ಪ್ರಶ್ನೆಯೇ ಉದ್ಭವಿಸಲಿಲ್ಲವೆಂಬುದು ತಿಳಿದುಬರುತ್ತದೆ. ತನಿಖೆಯು ಮುಕ್ತಾಯಗೊಂಡ ನಂತರ ತನಿಖಾಧಿಕಾರಿಯು ಮಂಜೂರಾತಿ ಪ್ರಾಧಿಕಾರಿಗೆ ದಾಖಲಾತಿಗಳನ್ನು ಸಲ್ಲಿಸಿದನು, ಮಂಜೂರಾತಿ ಪ್ರಾಧಿಕಾರಿಯು ತನ್ನ ಮುಂದೆ ಮಂಡಿಸಿರುವ ಸಮಗ್ರ ಸಾಕ್ಷ್ಯಾಧಾರಗಳನ್ನು ಕೂಲಂಕುಶವಾಗಿ ಪರಿಶೀಲಿಸಿ, ತನ್ನ ವಿವೇಚನೆಯಿಂದ ಮೇಲೆ ಹೇಳಿದ ಅಪರಾಧಗಳಿಗಾಗಿ ಮೇಲ್ಮನವಿದಾರ–2ನೇ ಆಪಾದಿತನ ವಿರುದ್ಧ ವ್ಯವಹರಣೆಯನ್ನು ಜರುಗಿಸುವುದಕ್ಕೆ ಮೇಲ್ನೋಟಕ್ಕೆ ಕಂಡು ಬರುವ ಸಾಕ್ಷ್ಯಾಧಾರವಿದೆ ಎಂದು ನಿರ್ಣಯಿಸಿ, ಮಂಜೂರಾತಿ ಪ್ರಾಧಿಕಾರಿಯು, ಎಂದರೆ, ಆಯುಕ್ತರು (ಕೇಂದ್ರ ಸುಂಕ) ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮದ 13(2)ನೇ ಪ್ರಕರಣದೊಂದಿಗೆ ಓದಿಕೊಂಡಂತೆ 7, 13(1)(ಡಿ)ಪ್ರಕರಣಗಳ ಭಾರತ ದಂಡ ಸಂಹಿತೆಯ 120–ಬಿ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧಗಳಿಗಾಗಿ 2ನೇ ಆಪಾದಿತನನ್ನು ಪ್ರಾಸಿಕ್ಯೂಟ್ ಮಾಡಲು ನಿಶಾನೆ ಪಿ.40ರ ಅನುಸಾರ ಮಂಜೂರಾತಿ ಆದೇಶವನ್ನು ನೀಡಿದರು. 2ನೇ ಆಪಾದಿತನನ್ನು ಪ್ರಾಸಿಕ್ಯೂಟ್ ಮಾಡುವುದಕ್ಕೆ ನೀಡಲಾದ ಮಂಜೂರಾತಿಯನ್ನು ಈ ಮೇಲ್ಮನವಿಯಲ್ಲಿ ಗಂಭೀರವಾಗಿ ಪ್ರಶ್ನಿಸಿಲ್ಲ. ಅದೂ ಅಲ್ಲದೆ, 2ನೇ ಆಪಾದಿತನನ್ನು ಪ್ರಾಸಿಕ್ಯೂಟ್ ಮಾಡುವುದಕ್ಕೆ ಮಂಜೂರಾತಿ ನೀಡಲು ಸಾಕಷ್ಟು ಸಾಕ್ಷ್ಯಾಧಾರವಿದ್ದು, ಅದು ಸಿಂಧುವಾದ ಮಂಜೂರಾತಿಯಾಗಿದೆ.

9. ಲಂಚದ ಮೊತ್ತವನ್ನು 1ನೇ ಆಪಾದಿತನು ಸ್ವೀಕರಿಸಿದನೆಂಬುದು ದಾಖಲೆಗಳಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. ದೂರುದಾರ ಪಿಡಬ್ಲ್ಯೂ–10 ಮತ್ತು ಛಾಯಾ ಪಂಚನಾದ ಬಸವರಾಜ್ ಪಿಡಬ್ಲ್ಯೂ–14, ಇವರ ಜೋಡಿ ಸಾಕ್ಷ್ಯದಿಂದ ಮತ್ತು ಬಳ್ಳಾರಿಯ ಕರ್ನಾಟಕ ಲೋಕಾಯುಕ್ತ ಪೊಲೀಸ್ ಇನ್ಸ್‌ಪೆಕ್ಟರ್ ಗುರಣ್ಣ ಸಿದ್ದಪ್ಪ ಹೆಬ್ಬಾಳ, ಪಿಡಬ್ಲ್ಯೂ–9 ಸಾಕ್ಷ್ಯದಿಂದ, ನೋಂದಣಿ ಪ್ರಮಾಣಪತ್ರದ ನೀಡಿಕೆ ವಿಷಯದಲ್ಲಿ ದೂರುದಾರನ ಪರವಾಗಿ ಕರ್ತವ್ಯ ನಿರ್ವಹಿಸಲು 1ನೇ ಆಪಾದಿತನು ಲಂಚದ ಮೊತ್ತಕ್ಕೆ ಬೇಡಿಕೆಯಿಟ್ಟು ಪಡೆದುಕೊಂಡದ್ದನ್ನು ಪ್ರಾಸಿಕ್ಯೂಷನ್ ರುಜುವಾತುಪಡಿಸಿದೆ. ದೂರುದಾರ ಪಿಡಬ್ಲ್ಯೂ–10, ತನ್ನ ಸಾಕ್ಷ್ಯದಲ್ಲಿ, ತಾನು ನೋಂದಣಿ ಪ್ರಮಾಣ ಪತ್ರವನ್ನು ಪಡೆಯುವುದಕ್ಕಾಗಿ ಬಳ್ಳಾರಿಯ ಕೇಂದ್ರ ಸುಂಕ

ಕಚೇರಿಗೆ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಿದ್ದೆ, ಅರ್ಜಿಯ ಹಾರ್ಡ್ ಕಾಪಿಯನ್ನು ಅಧೀಕ್ಷಕನಾಗಿ ಕಾರ್ಯ ನಿರ್ವಹಿಸುತ್ತಿದ್ದ 2ನೇ ಆಪಾದಿತನಿಗೆ ನೀಡಿದೆ. ಆತನು ಎರಡು ದಿನ ಬಿಟ್ಟು ಬರುವಂತೆ ಹೇಳಿದ್ದ; ಎರಡು ದಿನಗಳ ನಂತರ 2ನೇ ಆಪಾದಿತನ ಕಚೇರಿಗೆ ಹೋಗಿ ಆತನನ್ನು ಭೇಟಿ ಮಾಡಿದಾಗ ಆತನು ತನ್ನನ್ನು 1ನೇ ಆಪಾದಿತನ ಕೊಠಡಿಗೆ ಕರೆದುಕೊಂಡು ಹೋದ, ಆತನ ಕೊಠಡಿಯಲ್ಲಿ ಆತನು ನೋಂದಣಿ ಪ್ರಮಾಣಪತ್ರವನ್ನು ನೀಡುವುದಕ್ಕೆ 1.5 ಲಕ್ಷ ರೂ.ಗಳ ಬೇಡಿಕೆಯನ್ನಿಟ್ಟ, ಮಾತುಕತೆಯ ನಂತರ 1 ಮತ್ತು 2ನೇ ಆಪಾದಿತರಿಬ್ಬರೂ ಆ ಮೊತ್ತವನ್ನು 30,000/–ಕ್ಕೆ ಇಳಿಸಿದರು ಎಂದು ವಿವರವಾಗಿ ಹೇಳಿಕೆ ಸಲ್ಲಿಸಿದ್ದಾನೆ. ಮುಂದೆ, ಆತನ ಸಾಕ್ಷ್ಯದಲ್ಲಿ, ತನಗೆ ಲಂಚದ ಹಣವನ್ನು ನೀಡುವುದಕ್ಕೆ ಆಸಕ್ತಿಯಿರಲಿಲ್ಲ, ತಾನು ಬಳ್ಳಾರಿಯ ಲೋಕಾಯುಕ್ತ ಪೊಲೀಸ್ ಠಾಣೆಯ ಮುಂದೆ ದೂರು ಸಲ್ಲಿಸಿದೆ; ದೂರಿನ ಜೊತೆಗೆ ತಾನು ತನ್ನ ಮತ್ತು ಆಪಾದಿತನ ನಡುವಿನ ಸಂಭಾಷಣೆಯನ್ನು ತನ್ನ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದನ್ನು ಕೂಡ ಒಪ್ಪಿಸಿದೆ; ಆಪಾದಿತರಿಬ್ಬರ ವಿರುದ್ಧ 26.2.2013ರಂದು ಅಪರಾಧದ ಪ್ರಕರಣವು ದಾಖಲಾಯಿತು ಎಂದು ಹೇಳಿದ್ದಾನೆ. ತದನಂತರ, ಲೋಕಾಯುಕ್ತ ಪೊಲೀಸ್ ಠಾಣೆಯ ಕಚೇರಿಯಲ್ಲಿ ಇಬ್ಬರು ಪಂಚರ ಭದ್ರತೆಯನ್ನು ತೆಗೆದುಕೊಂಡು ವಹಿಸುವಿಕೆ ಮಹಜರ್ ಅನ್ನು ಬರೆದು, ಅಪರಾಧಿಗಳನ್ನು ಸಿಕ್ಕಿಸುವ ಬಲೆಯನ್ನು ಹೆಣೆಯಲಾಯಿತು; ದೂರುದಾರನಿಂದ ಲಂಚವನ್ನು ಕೇಳಿ ಪಡೆಯುವಾಗ 1ನೇ ಆಪಾದಿತನು ಸಿಕ್ಕಿಬಿದ್ದನು, ಆ ಕಾರ್ಯಕ್ಕಾಗಿ ಸಿದ್ಧಪಡಿಸಿದ್ದ ಕರೆನ್ಸಿ ನೋಟುಗಳನ್ನು 1ನೇ ಆಪಾದಿತನಿಂದ ವಶಪಡಿಸಿಕೊಳ್ಳಲಾಯಿತು; ಬಲೆಗೆ ಬೀಳಿಸಿದ ಪಂಚನಾಮೆಯನ್ನು ಬರೆಯಲಾಯಿತು. ದೂರುದಾರನನ್ನು ಪಾಟೀ ಸವಾಲಿಗೆ ಒಳಪಡಿಸಿದರೂ, ಆತನು ನೋಂದಣಿ ಪ್ರಮಾಣಪತ್ರ ಪಡೆಯುವುದಕ್ಕಾಗಿ ಅರ್ಜಿ ಸಲ್ಲಿಸಿದ್ದ ಎಂಬ ಕಾರಣದ ಬಗ್ಗೆ ಆತನ ಹೇಳಿಕೆಯನ್ನು ನಂಬದಿರುವಂತಹ ಯಾವುದೇ ಫಲಿತಾಂಶವೂ ಹೊರಬರಲಿಲ್ಲ, ಹಾಗಾಗಿ ಆ ವಿಷಯವು ನಿರ್ವಿವಾದವಾಗಿದೆ. ಯಾವುದೇ ಆಧಾರವಿಲ್ಲದೆ 1 ಮತ್ತು 2ನೇ ಆಪಾದಿತರ ವಿರುದ್ಧ ದೂರನ್ನು ದಾಖಲಿಸಲು ದೂರುದಾರನಿಗೆ ಏನಾದರೂ ದ್ವೇಷ ಅಥವಾ ಕಾರಣವಿತ್ತೇ ಎಂಬ ಬಗ್ಗೆಯೂ ಯಾವುದೇ ಸೂಚನೆಯಿಲ್ಲ. ಪಿಡಬ್ಲ್ಯೂ–9ರ ಸಾಕ್ಷ್ಯವನ್ನು, ಬಳ್ಳಾರಿಯ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಕಚೇರಿಯಲ್ಲಿ ಸಹಾಯಕ

ಎಂಜಿನಿಯರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದು, ನಂತರ ಲೋಕಾಯುಕ್ತ ಕಚೇರಿಗೆ ಕಾರ್ಯ ನಿರ್ವಾಹಕ ಎಂಜಿನಿಯರ್ ಅವರಿಂದ ಪ್ರತಿನಿಯೋಜನೆಗೊಂಡಿದ್ದ ಪಿಡಬ್ಲ್ಯೂ–4 ಬಸವರಾಜ್, ಛಾಯಾ ಸಾಕ್ಷಿದಾರನ ಸಾಕ್ಷ್ಯವು ಸಂಪೂರ್ಣವಾಗಿ ಪುಷ್ಟೀಕರಿಸುತ್ತದೆ. ಪಿಡಬ್ಲ್ಯೂ–4 ತನ್ನ ಸಾಕ್ಷ್ಯದಲ್ಲಿ, ವಹಿಸುವಿಕೆ ಮಹಜರ್‌ಅನ್ನು ಹೇಗೆ ನಡೆಸಲಾಯಿತು, ಆಪಾದಿತರನ್ನು ಸಿಕ್ಕಿಸುವುದಕ್ಕಾಗಿ ಸಿದ್ಧಪಡಿಸಿದ ಕರೆನ್ಸಿ ನೋಟುಗಳನ್ನು ದೂರುದಾರನಿಗೆ ಹೇಗೆ ವಹಿಸಿಕೊಡಲಾಯಿತು ಮತ್ತು ತಾನು ದೂರುದಾರನೊಂದಿಗೆ 1 ಮತ್ತು 2ನೇ ಆಪಾದಿತರ ಕಚೇರಿಗೆ ಹೋಗಿದ್ದು, ತಾವು ಮೊದಲು 2ನೇ ಆಪಾದಿತನನ್ನು ಭೇಟಿ ಮಾಡಿದ್ದು, ಆತನು ಲಂಚದ ಹಣದ ಬಗ್ಗೆ ವಿಚಾರಿಸಿದ್ದು ಹಾಗೂ 1ನೇ ಆಪಾದಿತನ ಕೊಠಡಿಗೆ ಕರೆದುಕೊಂಡು ಹೋಗಿದ್ದು, ಅಲ್ಲಿ 1ನೇ ಅಪಾದಿತನು ದೂರುದಾರನಿಂದ ಲಂಚದ ಮೊತ್ತವನ್ನು ಕೇಳಿ ಪಡೆದುಕೊಂಡದ್ದು, ಬಲೆ ಬೀಸಿದ ಪಂಚನಾಮೆಯ ಪ್ರಕಾರ 1ನೇ ಆಪಾದಿತನ ಸ್ವಾಧೀನದಿಂದ ಲಂಚದ ಹಣವನ್ನು ವಶಪಡಿಸಿಕೊಂಡದ್ದು, ಈ ಎಲ್ಲದರ ಬಗ್ಗೆಯೂ ಸವಿವರವಾದ ವಿವರಣೆಯನ್ನು ನೀಡಿದ್ದು, ಆತನು 2ನೇ ಆಪಾದಿತನು ನಿರ್ವಹಿಸಿದ ಪಾತ್ರದ ಬಗ್ಗೆಯೂ ಸಹ ಹೇಳಿದ್ದಾನೆ. ಅವರ ಸಾಕ್ಷ್ಯವನ್ನು ಮುಂದೆ ಎಲ್ಲಾ ರೀತಿಯಿಂದಲೂ ಬಲೆ ನೇಯ್ದ ಪೊಲೀಸ್ ಇನ್ಸ್‌ಪೆಕ್ಟರ್‌ನ ಸಾಕ್ಷ್ಯವು ಮತ್ತಷ್ಟು ಪುಷ್ಟೀಕರಿಸುತ್ತದೆ. ಅದರಂತೆಯೇ ಪ್ರಾಸಿಕ್ಯೂಷನ್, 1ನೇ ಆಪಾದಿತನು ಲಂಚದ ಮೊತ್ತವನ್ನು ಕೇಳಿ ಪಡೆದ ಬಗ್ಗೆ ತಿಳಿಸಲು ಸಾಕಷ್ಟು ಮತ್ತು ಸಮಾಧಾನಕರವಾದ ಸಾಕ್ಷ್ಯವನ್ನು ದಾಖಲೆಯಲ್ಲಿ ಮಂಡಿಸಿದ್ದು, 1ನೇ ಆಪಾದಿತನು ಮೊಕದ್ದಮೆಯ ಇತ್ಯರ್ಥದ ಅವಧಿಯಲ್ಲಿ ಮರಣ ಹೊಂದಿದ್ದರಿಂದ ಆತನ ವಿರುದ್ಧದ ಮೊಕದ್ದಮೆಯನ್ನು ಕೊನೆಗೊಳಿಸಲಾಗಿದೆ.

10. ಆಪಾದಿಸಲಾದ ಅಪರಾಧ ಪ್ರಕರಣದಲ್ಲಿ ನಮಗೆ 2ನೇ ಆಪಾದಿತನ ಸಂಕೀರ್ಣತೆಯು ಸಂಬಂಧಿಸಿದ್ದಾಗಿದೆ. ದೂರುದಾರನು ಈ ಎಲ್ಲವೂ ಪ್ರಾರಂಭವಾಗಿದ್ದು ಬಳ್ಳಾರಿಯಲ್ಲಿ ಅಧೀಕ್ಷಕ (ಕೇಂದ್ರ ಸುಂಕ)ನಾಗಿ ಕಾರ್ಯ ನಿರ್ವಹಿಸುತ್ತಿದ್ದ 2ನೇ ಆಪಾದಿತನಿಂದಲೇ ಎಂದು ಸಾಕ್ಷ್ಯ ನುಡಿದಿದ್ದಾನೆ. ಮೊದಲಿಗೆ, ನೋಂದಣಿ ಸಂಬಂಧಿತ ಅರ್ಜಿಯನ್ನು ಸ್ವೀಕರಿಸಿ ವಿಧಿವಿಧಾನವನ್ನು ಪೂರೈಸುವ ಅಧಿಕಾರ ಹೊಂದಿರುವ 2ನೇ ಆಪಾದಿತನನ್ನು ದೂರುದಾರನು ಭೇಟಿಯಾಗಿದ್ದಾನೆಂದು ಸಾಕ್ಷ್ಯ ಹೇಳಲಾಗಿದೆ. ದೂರುದಾರನು, ಆನ್‌ಲೈನ್ ಮುಖಾಂತರ ಸಲ್ಲಿಸಿದ ಅರ್ಜಿಯ ಹಾರ್ಡ್ ಕಾಪಿಯನ್ನು

2ನೇ ಆಪಾದಿತನಿಗೆ ತಾನು ಕೊಟ್ಟೆನು, ಆತನು ತನ್ನನ್ನು ಎರಡು ದಿನ ಬಿಟ್ಟು ಬರುವಂತೆ ಹೇಳಿದನು, ಆ ನಂತರ 2ನೇ ಆಪಾದಿತನನ್ನು ತಾನು ಭೇಟಿಯಾದಾಗ ಆತನು ತನ್ನನ್ನು 1ನೇ ಆಪಾದಿತನ ಕೊಠಡಿಗೆ ಕರೆದುಕೊಂಡು ಹೋದನು, ಅಲ್ಲಿ ಅವರಿಬ್ಬರೂ ನೋಂದಣಿ ಪ್ರಮಾಣಪತ್ರವನ್ನು ನಿಡುವುದಕ್ಕೆ 1.5 ಲಕ್ಷ ರೂ.ಲಂಚದ ಮೊತ್ತಕ್ಕೆ ಬೇಡಿಕೆಯನ್ನಿಟ್ಟರು, ಸಂಧಾನ ಮಾತುಕತೆಗಳ ನಂತರ ಅವರು 30,000/– ರೂ.ಗಳನ್ನು ಲಂಚವಾಗಿ ಪಡೆಯುವುದಕ್ಕೆ ಒಪ್ಪಿಕೊಂಡರು ಎಂದು ಹೇಳಿಕೆ ನೀಡಿದ್ದಾನೆ. ಮುಂದುವರೆದು, ಬಲೆಗೆ ಸಿಕ್ಕಿಸುವುದಕ್ಕೆ ನಿಗದಿಪಡಿಸಿದ ದಿನದಂದು, ತಾನು 2ನೇ ಆಪಾದಿತನನ್ನು ಭೇಟಿಯಾದೆ, ಆತನು ತನ್ನನ್ನು ಲಂಚದ ಹಣದ ಬಗ್ಗೆ ವಿಚಾರಿಸಿದ, ತದನಂತರ 1ನೇ ಆಪಾದಿತನ ಕೊಠಡಿಗೆ ತನ್ನನ್ನು ಕರೆದುಕೊಂಡು ಹೋದ, ಅಲ್ಲಿ ಅವರಿಬ್ಬರೂ ಲಂಚದ ಹಣವನ್ನು ಕೇಳಿದರು, 1ನೇ ಆಪಾದಿತನು ತನ್ನಿಂದ ಕರೆನ್ಸಿ ನೋಟುಗಳನ್ನು ಪಡೆದುಕೊಂಡ ಎಂದು ದೂರುದಾರನು ಹೇಳಿಕೆ ನೀಡಿದ್ದಾನೆ. ಆದರೆ 2ನೇ ಆಪಾದಿತನು ತಾನು ದೂರುದಾರನಿಗೆ ಲಂಚದ ಹಣವನ್ನು ತಂದಿರುವೆಯಾ ಎಂದು ಕೇಳಿದೆ ಎಂಬ ಅಂಶವನ್ನು ಸ್ಪಷ್ಟವಾಗಿ ನಿರಾಕರಿಸಿದ್ದಾನೆ. 2ನೇ ಆಪಾದಿತನಿಗೆ ಲಂಚದ ಹಣವನ್ನು ಕೇಳಿ ಪಡೆಯುವ ಉದ್ದೇಶವಿದ್ದಿದ್ದರೆ, ದೂರುದಾರನು ಎರಡು ದಿವಸದ ನಂತರ ಭೇಟಿ ಮಾಡಿದಾಗ, ಲಂಚದ ಹಣವನ್ನು ನೇರವಾಗಿ 1ನೇ ಆಪಾದಿತನಿಗೆ ಕೊಡಿಸುವ ಬದಲಿಗೆ ದೂರುದಾರನಿಂದ ಆತನೇ ನೇರವಾಗಿ ಲಂಚದ ಹಣವನ್ನು ಪಡೆದುಕೊಳ್ಳಲು ಸಾಧ್ಯವಿತ್ತು. 1ನೇ ಆಪಾದಿತನಿಗೆ ನೇರವಾಗಿ ಲಂಚದ ಹಣವನ್ನು ಕೊಡಿಸುವುದಕ್ಕೆ ಮಾತ್ರವೇ ದೂರುದಾರನನ್ನು ಆತನು 1ನೇ ಆಪಾದಿತನ ಕೊಠಡಿಗೆ ಕರೆದುಕೊಂಡು ಹೋಗುವುದಿಲ್ಲ. 2ನೇ ಆಪಾದಿತನು 1ನೇ ಆಪಾದಿತನಿಗೆ ಅಧೀನ ಅಧಿಕಾರಿಯಾಗಿರುವುದರಿಂದ ದೂರುದಾರನನ್ನು 1ನೇ ಆಪಾದಿತನ ಕೊಠಡಿಗೆ ಕರೆದುಕೊಂಡು ಹೋಗುವ ಸಂಭವವಿರುತ್ತದೆ. ಅದರರ್ಥ ಲಂಚದ ಹಣವನ್ನು ಕೇಳಿ ಪಡೆಯುವುದಕ್ಕೆ 1 ಮತ್ತು 2ನೇ ಆಪಾದಿತರು ಒಪ್ಪಂದ ಮಾಡಿಕೊಂಡಿದ್ದರು ಎಂದರ್ಥವಲ್ಲ. ಆದರೂ ಕೊನೆಗೆ ಲಂಚವನ್ನು ಪಡೆದದ್ದು 1ನೇ ಆಪಾದಿತನೇ ಹಾಗೂ ಅದನ್ನು ವಶಪಡಿಸಿಕೊಂಡಿರುವುದೂ 1ನೇ ಆಪಾದಿತನಿಂದಲೇ. ಲಂಚದ ಹಣವನ್ನು 2ನೇ ಆಪಾದಿತನ ಸಮಕ್ಷಮದಲ್ಲಿ 1ನೇ ಆಪಾದಿತನಿಗೆ ನೀಡಲಾಯಿತು ಎಂದಾಗಲಿ ಅಥವಾ 2ನೇ ಆಪಾದಿತನು ದೂರುದಾರನಿಂದ ಲಂಚದ ಒಂದು ಭಾಗವನ್ನು ಪಡೆದುಕೊಂಡನು ಎಂದಾಗಲಿ ಪ್ರಾಸಿಕ್ಯೂಷನ್‌ನ ವಾದವಲ್ಲ. ಕೇವಲ

ಕೇಂದ್ರ ಮಾರಾಟ ತೆರಿಗೆ ನೋಂದಣಿ ಪ್ರಮಾಣಪತ್ರವನ್ನು ಪಡೆಯುವ ವಿಷಯದಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ ಬಗ್ಗೆ 2ನೇ ಆಪಾದಿತನು ದೂರುದಾರನಿಗೆ ಮಾರ್ಗದರ್ಶನ ಮಾಡಿದ ಕಾರಣ ಮಾತ್ರದಿಂದಲೇ ದೂರುದಾರನ ಪರವಾಗಿ ತಮ್ಮ ಹುದ್ದೆಯ ಕರ್ತವ್ಯವನ್ನು ನಿರ್ವಹಿಸುವುದಕ್ಕೆ ದೂರುದಾರನಿಂದ ಲಂಚದ ಹಣವನ್ನು ಕೇಳಿ ಪಡೆಯಲು 1 ಮತ್ತು 2ನೇ ಆಪಾದಿತರ ನಡುವೆ ಒಪ್ಪಂದವಾಗಿತ್ತು ಎಂದು ಹಾಗೂ ದೂರುದಾರನಿಂದ ಲಂಚದ ಹಣವನ್ನು ಕೇಳಿ ಪಡೆಯಲು 1 ಮತ್ತು 2ನೇ ಆಪಾದಿತರು ಸಂಚು ರೂಪಿಸಿದ್ದರು ಎಂದು ಹೇಳಲು ಸಾಕ್ಷ್ಯವಿಲ್ಲ. ವಾಸ್ತವವಾಗಿ, ಅಪರಾಧದ ಸಂಚನ್ನು ಅಪರಾಧ ನಡೆಯುವ ಮುಂಚೆ, ಅಪರಾಧ ನಡೆಯುವ ಅವಧಿಯಲ್ಲಿ ಅಥವಾ ಅಪರಾಧ ನಡೆದ ನಂತರ ಪ್ರತ್ಯಕ್ಷ ಸಾಕ್ಷಿಯ ಮೂಲಕ ಅಥವಾ ಸಾಂದರ್ಭಿಕ ಸಾಕ್ಷ್ಯದ ಮೂಲಕ ಅಥವಾ ಪಕ್ಷಕಾರರ ವರ್ತನೆಯ ಮೂಲಕ ಸಾಬೀತುಪಡಿಸಬಹುದಾಗಿದೆ. 2ನೇ ಆಪಾದಿತನು ಅಧೀನ ಅಧಿಕಾರಿಯಾಗಿ, 1ನೇ ಆಪಾದಿತನ ನಿರ್ದೇಶನದ ಮೇರೆಗೆ ತನ್ನ ಕರ್ತವ್ಯಗಳನ್ನು ನಿಭಾಯಿಸುವುದಕ್ಕೆ ಹಾಗೂ ನಿರ್ವಹಿಸುವುದಕ್ಕೆ ಬದ್ಧನಾಗಿದ್ದನು. ಅವರಿಬ್ಬರೂ ಒಂದೇ ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಕೊನೆಗೆ ನೋಂದಣಿ ಪ್ರಮಾಣಪತ್ರಕ್ಕೆ ಸಹಿ ಹಾಕಿ ನೀಡಬೇಕಾದ ಸಕ್ಷಮ ಪ್ರಾಧಿಕಾರಿಯೂ ಕೂಡ 1ನೇ ಆಪಾದಿತನೇ ಆಗಿದ್ದನು ಎಂದು 2ನೇ ಆಪಾದಿತನ ಪರ ನ್ಯಾಯವಾದಿಯು ವಾದಿಸಿದ್ದಾರೆ. ಭಾರತೀಯ ಸಾಕ್ಷ್ಯ ಅಧಿನಿಯಮದ 65–ಬಿ ಪ್ರಕರಣವು ಪಾಲನೆಯಾಗದಿರುವುದರಿಂದ ಸಿಡಿಗಳು, ಮೊಬೈಲ್ ಸಂಭಾಷಣೆ, ವಾಯ್ಸ್ ರೆಕಾರ್ಡರ್, ಕಾಲ್ ರೆಕಾರ್ಡ್‌ಗಳಂಥ ವಿದ್ಯುನ್ಮಾನ ಉಪಕರಣಕ್ಕೆ ಸಂಬಂಧಿಸಿದ ಸಾಕ್ಷ್ಯವನ್ನು ಆಧಾರವಾಗಿಟ್ಟುಕೊಳ್ಳಲಾಗದು ಎಂಬ 2ನೇ ಆಪಾದಿತನ ಪರ ಹಾಜರಾದ ಮಾನ್ಯ ನ್ಯಾಯವಾದಿಯ ವಾದವು ಸರಿಯಾಗಿದೆ. 1 ಮತ್ತು 2ನೇ ಆಪಾದಿತರು ರೂಪಿಸಿದ ಅಪರಾಧದ ಸಂಚನ್ನು ಯುಕ್ತ ಸಂದೇಹವನ್ನು ಮೀರಿ ಸಾಬೀತುಪಡಿಸಲು ಅಂಗೀಕರಿಸಬಹುದಾದ ಪ್ರತ್ಯಕ್ಷ ಸಾಕ್ಷ್ಯವನ್ನು ಹಾಜರುಪಡಿಸುವುದಕ್ಕೆ ಮತ್ತು ಸಂದರ್ಭಗಳನ್ನು ಸುಸ್ಥಾಪಿಸುವುದಕ್ಕೆ ಪ್ರಾಸಿಕ್ಯೂಷನ್ ವಿಫಲವಾಗಿದೆ. 2ನೇ ಆಪಾದಿತನಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಸಾಕ್ಷ್ಯ ಕುರಿತಾದ ವಿವೇಚನೆ ಮತ್ತು ವ್ಯವಹರಿಸುವ ರೀತಿಯು 1ನೇ ಆಪಾದಿತನ ವಿರುದ್ಧ ನಡೆಸುವಂಥ ಸಾಕ್ಷ್ಯ ಕುರಿತಾದ ವಿವೇಚನೆ ಹಾಗೂ ವ್ಯವಹರಿಸುವ ರೀತಿಗಿಂತ

ಭಿನ್ನವಾಗಿರಬೇಕು. 2ನೇ ಆಪಾದಿತನ ವಿರುದ್ಧದ ಸಾಕ್ಷ್ಯ ವಿವೇಚನೆಗೆ ಸಂಬಂಧಪಡುವಷ್ಟರ ಮಟ್ಟಿಗೆ ಅಧೀನ ನ್ಯಾಯಾಲಯದ ದೃಷ್ಟಿಕೋನವು ಸೂಕ್ತವಾಗಿಲ್ಲ. ಪ್ರಾಸಿಕ್ಯೂಷನ್ ಕೆಲವು ಸಾಕ್ಷ್ಯಗಳನ್ನು ಹಾಜರುಪಡಿಸಿದ್ದರೂ, ಅವು ಕೇವಲ 1ನೇ ಆಪಾದಿತನ ವಿರುದ್ಧದ ಸಾಕ್ಷ್ಯಗಳು ಮಾತ್ರವೇ ಆಗಿವೆ. ಆದರೆ, 2ನೇ ಆಪಾದಿತನಿಗೆ ಸಂಬಂಧಪಡುವ ಮಟ್ಟಿಗೆ ಸಾಕ್ಷ್ಯದ ಕೊರತೆಯಿದೆ. 2ನೇ ಆಪಾದಿತನ ವಿರುದ್ಧದ ಸಾಕ್ಷ್ಯವು ಖಂಡಿತವಾಗಿಯೂ ಆತನ ವಿರುದ್ಧ ಹೊರಿಸಿದ ಆರೋಪಗಳಿಗೆ ಆತನನ್ನು ತಪ್ಪಿತಸ್ಥನನ್ನಾಗಿ ಮಾಡುವಷ್ಟು ಸಮರ್ಥವಾಗಿಲ್ಲ. ಆತನು 1ನೇ ಆಪಾದಿತನ ಅಧೀನ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದನು ಎಂಬುದನ್ನು ಪರಿಗಣಿಸಿದಾಗ, 1ನೇ ಆಪಾದಿತನೊಂದಿಗಿನ ಆತನ ಭೇಟಿಯನ್ನು ದೂರುದಾರನಿಂದ ಲಂಚದ ಹಣವನ್ನು ಕೇಳಿ ಪಡೆಯುವುದಕ್ಕೆ ಆದ ಒಪ್ಪಂದವೆಂದು ಹೇಳಲಾಗದು. ಅಧೀನ ನ್ಯಾಯಾಲಯವು ಈ ಎಲ್ಲಾ ಮಹತ್ವದ ಅಂಶಗಳನ್ನು ಉಪೇಕ್ಷಿಸಿ ಪಕ್ಕಕ್ಕೆ ತಳ್ಳಿದೆ. ಆದ್ದರಿಂದ, ನಾನು ಸಾಕ್ಷ್ಯದ ಗುಣಾವಗುಣಗಳನ್ನು ಮರು ವಿವೇಚಿಸಿದ ನಂತರ, 2ನೇ ಆಪಾದಿತನ ವಿರುದ್ಧ ದಾಖಲೆಯಲ್ಲಿರುವ ಸಾಕ್ಷ್ಯವು ಆತನ ವಿರುದ್ಧ ಹೊರಿಸಲಾದ ಆರೋಪಗಳಿಗೆ ಆತನನ್ನು ತಪ್ಪಿತಸ್ಥನನ್ನಾಗಿ ಮಾಡುವಷ್ಟು ಸಮರ್ಥವಾಗಿಲ್ಲ ಎಂಬುದು ನನ್ನ ಪರಿಗಣಿತ ಅಭಿಪ್ರಾಯವಾಗಿದೆ. ಹಾಗಾಗಿ, ಅಪರಾಧ ನಿರ್ಣಯದ ತೀರ್ಪು ಮತ್ತು ಮೇಲ್ಮನವಿದಾರ/2ನೇ ಆಪಾದಿತನ ಶಿಕ್ಷೆಯ ಸಮರ್ಥನೀಯವಾಗಿಲ್ಲ. ಅದು ರದ್ದುಪಡಿಸುವುದಕ್ಕೆ ತಕ್ಕದ್ದಾಗಿದೆ. ತದನುಸಾರವಾಗಿ, ಮೇಲ್ಮನವಿಯನ್ನು ಪುರಸ್ಕರಿಸಲಾಗಿದೆ. ಧಾರವಾಡದ IIIನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರ (ಲೋಕಾಯುಕ್ತ ಮತ್ತು ಸಿಬಿಐ ಮೊಕದ್ದಮೆಗಳ ವಿಶೇಷ ನ್ಯಾಯಾಧೀಶರು) ಮುಂದಿದ್ದ ಸ್ಪೆಷಲ್.ಸಿಬಿಐ.ಸಿಸಿಸಿ.ನಂ.3/2014 ಮೊಕದ್ದಮೆಯಲ್ಲಿ ಮೇಲ್ಮನವಿದಾರ/ 2ನೇ ಆಪಾದಿತನ ವಿರುದ್ಧ ನೀಡಿದ ಅಪರಾಧ ನಿರ್ಣಯದ ತೀರ್ಪು ಮತ್ತು ಶಿಕ್ಷೆಯ ಆದೇಶವನ್ನು ಈ ಮೂಲಕ ರದ್ದುಪಡಿಸಲಾಗಿದೆ. ಮೇಲ್ಮನವಿದಾರ–2ನೇ ಆಪಾದಿತನ ವಿರುದ್ಧ ಹೊರಿಸಿದ ಎಲ್ಲಾ ಆರೋಪಗಳಿಂದ ಆತನನ್ನು ಖುಲಾಸೆಗೊಳಿಸಲಾಗಿದೆ.

---